


# ಕ್ರೌರ್ಯವ ಹಂಚುವ ಪಾಪದಲ್ಲಿ ನಮ್ಮ ಪಾಲೆಷ್ಟು?



ಶೋಗಳ ಜೋಕುಗಳಿಗೆ ನಗುವುದು ಹೇಗೆ? ರಾತ್ರಿಗಾಗಿ ಒಳ್ಳೆಯ ಊಟ ತಯಾರಿಸಿಟ್ಟಿದ್ದಿದೆ, ಅದನ್ನು ಆಸ್ವಾದಿಸುವುದು ಹೇಗೆ? ಈ ವಾರಾಂತ್ಯವೇ ಸ್ನೇಹಿತೆಯ ಆರತಕ್ಷತೆಗೆ ಆಮಂತ್ರಣವಿದೆ. ಫೋಟೊಗಳಲ್ಲಿ ಚೆಂದ ಕಾಣಲಾದರೂ ತುಟಿಯ ಮೇಲೆ ಒಂದಿಷ್ಟು ನಗು ಉಳಿಸಿಕೊಳ್ಳಬೇಕಲ್ಲವೇ? ಎಷ್ಟೆಂದರೂ ಅಂತರ್ಜಾಲದಲ್ಲಿ ಯಾವಾಗಲೂ ಉಳಿಯುವ ಫೋಟೊ.

ಅಮೆರಿಕದಲ್ಲಿ ಸಾರ್ವಜನಿಕ ಶೂಟಿಂಗ್‌ಗಳೆನ್ನುವುದು ಅಷ್ಟೊಂದು ಸಾಮಾನ್ಯ ಸಂಗತಿಯಾಗಿಬಿಟ್ಟಿದೆ. ಇನ್ನೂ ಅರ್ಧ ವರ್ಷವೇ ಕಳೆದಿಲ್ಲ, ಆಗಲೇ ಇನ್ನೂರಕ್ಕೂ ಹೆಚ್ಚು ಮಾಸ್ ಶೂಟಿಂಗ್‌ಗಳು ಈ ದೇಶದಲ್ಲಿ ನಡೆದಿವೆ. ಮೇ 24ರಂದು ಟೆಕ್ಸಾಸ್‌ನ ಯುವಾಲ್ಡೆ ನಗರದಲ್ಲಿ ಪ್ರೈಮರಿ ಶಾಲೆಯ ಮಕ್ಕಳ ಮೇಲೆ ಗುಂಡಿನ ದಾಳಿಯೆಸಗಿದ ಈ ಘಟನೆಯ ಐದೇ ದಿನಗಳ ಮೊದಲು ಷಿಕಾಗೋ ನಗರದ ಮೆಕ್ ಡೊನಾಲ್ಡ್ಸ್‌ನಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಇಬ್ಬರು ಮೃತಪಟ್ಟು, ಎಂಟು ಜನ ಗಾಯಗೊಂಡಿದ್ದರು. ಹತ್ತೇ ದಿನಗಳ ಮೊದಲು ಮೇ 14ರಂದು ನ್ಯೂಯಾರ್ಕಿನ ಬಫಲೋ ನಗರದ ಸೂಪರ್‌ಮಾರ್ಕೆಟ್ ಒಂದಕ್ಕೆ ನುಗ್ಗಿ ಗನ್‌ಧಾರಿಯೊಬ್ಬ ಹತ್ತು ಜನರನ್ನು ಬಲಿ ತೆಗೆದುಕೊಂಡಿದ್ದ.

2012ರ ಡಿಸೆಂಬರ್ ಹದಿನಾಲ್ಕರಂದು ಕನೆಕ್ಟಿಕಟ್ ರಾಜ್ಯದ ಸ್ಯಾಂಡಿ ಹುಕ್ ಎಂಬ ಊರಿನಲ್ಲಿ ಇಪ್ಪತ್ತು ವರ್ಷದ ಆಡಮ್ ಲಾನ್ಜಾ, ಮನೆಯಲ್ಲಿ ತನ್ನ ತಾಯಿಗೆ ಮೊದಲು ಗುಂಡು ಹೊಡೆದು, ಸಮೀಪದ ಪ್ರೈಮರಿ ಶಾಲೆಗೆ ನುಗ್ಗಿ ಮೊದಲನೆಯ ತರಗತಿಯಲ್ಲಿ ಓದುತ್ತಿದ್ದ ಇಪ್ಪತ್ತು ಮಕ್ಕಳನ್ನು ಬಲಿತೆಗೆದುಕೊಂಡಿದ್ದ. ಅದು ತನ್ನ ದಾರುಣತೆಯ ಕಾರಣಕ್ಕೆ ಇಡೀ ಅಮೆರಿಕದ ಹೃದಯವನ್ನು ಕಲಕಿದ ಘಟನೆ. ಸ್ಯಾಂಡಿ ಹುಕ್‌ನ ಮೊದಲೂ ನಂತರವೂ ನೂರಾರು ಶೂಟಿಂಗ್‌ಗಳು ನಡೆಯುತ್ತಲೇ ಇವೆ, ಅಲ್ಲಲ್ಲಿ ಸುದ್ದಿಯಾಗಿ ಹಂಚಿ ಹೋಗುತ್ತಲೇ ಇವೆ.

## ಅಮೆರಿಕ ಮತ್ತು ಗನ್ ರಾಜಕಾರಣ

ಅಷ್ಟೊಂದು ಅಮೆರಿಕನ್ನರ ಬಳಿ ಏಕೆ ಗನ್‌ಗಳಿವೆ? ಅದನ್ನು ನಿಷೇಧಿಸಲು ಆಗುವುದಿಲ್ಲವೇ ಎಂಬ ಪ್ರಶ್ನೆ ಹುಟ್ಟುವುದು ಸಹಜ. ಆದರೆ ಹಾಗೆ ಮಾಡುವುದು ಸುಲಭವಲ್ಲ.

ಅಮೆರಿಕದಲ್ಲಿರುವುದು ದ್ವಿಪಕ್ಷಗಳ ಪ್ರಜಾಪ್ರಭುತ್ವ. ಈ ದೇಶಕಾಲದಲ್ಲಿ ಡೆಮಾಕ್ರಟಿಕ್ ಪಕ್ಷ ಎಡಪಂಥದ ಮೌಲ್ಯಗಳನ್ನೂ, ರಿಪಬ್ಲಿಕನ್ ಪಕ್ಷ ಬಲಪಂಥೀಯ ಮೌಲ್ಯಗಳನ್ನೂ ಬೆಂಬಲಿಸುತ್ತದೆ. ಸಾಮಾನ್ಯವಾಗಿ ದೊಡ್ಡ ನಗರಗಳಲ್ಲಿ ಡೆಮಾಕ್ರಟಿಕ್ ಪಕ್ಷವೂ, ಗ್ರಾಮಾಂತರ ಪ್ರದೇಶಗಳಲ್ಲಿ ರಿಪಬ್ಲಿಕನ್ ಪಕ್ಷವೂ ಅಧಿಕಾರಕ್ಕೆ ಬರುತ್ತದೆ. ಅಮೆರಿಕ ಭೌಗೋಳಿಕವಾಗಿ ದೊಡ್ಡ ದೇಶ. ಒಂದು ದೃಷ್ಟಾಂತವನ್ನು ಕೊಟ್ಟು ಹೇಳಬೇಕೆಂದರೆ, ಅಮೆರಿಕದ ಭೌಗೋಳಿಕ ಪ್ರದೇಶ ಭಾರತಕ್ಕಿಂಥ ಮೂರು ಪಟ್ಟು ದೊಡ್ಡದಿದೆ. ಆದರೆ ಜನಸಂಖ್ಯೆ ಭಾರತಕ್ಕಿಂತ ಸುಮಾರು ಮೂರು ಪಟ್ಟು ಚಿಕ್ಕದಿದೆ. ಜೊತೆಗೆ ನಗರ ಪ್ರದೇಶದಲ್ಲಿ ಜನಸಂಖ್ಯೆ ದಟ್ಟವಾಗಿದ್ದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಜನಸಂಖ್ಯೆ ವಿರಳವಾಗಿದೆ.

ಅಮೆರಿಕದ ಗ್ರಾಮೀಣ ಭಾಗಗಳಲ್ಲಿ ನೂರಾರು ಎಕರೆಗಳಷ್ಟು ಹೊಲಗಳ ನಡುವೆ ಎಷ್ಟೋ ಒಂದು ಕಡೆ ಒಂಟಿ ಮನೆಗಳಷ್ಟೇ ಇರುತ್ತವೆ. ಹತ್ತಿರದ ಪೊಲೀಸ್ ಠಾಣೆಯೂ ನೂರಾರು ಮೈಲಿಗಳ ಆಚೆಗಿರುತ್ತದೆ. ಹೀಗಾಗಿ ಇಂಥ ಸ್ಥಳಗಳಲ್ಲಿ ಸ್ವರಕ್ಷಣೆಗಾಗಿ ಜನರ ಬಳಿ ಗನ್‌ಗಳು ಬೇಕೇ ಬೇಕಾಗುತ್ತವೆ ಎಂಬ ಅಭಿಮತದ ಮೇಲೆ ಇಡೀ ದೇಶದ ಗನ್ ಸಂಬಂಧಿತ ರಾಜಕಾರಣ ನಿಂತಿದೆ. ಜಾರ್ಜಿಯಾ ರಾಜ್ಯದ ಕೆನ್ನಾ ಎಂಬ ಊರಿನಲ್ಲಿ ಪ್ರತಿ ಮನೆಯಲ್ಲೂ ಬಂದೂಕು ಇರಲೇಬೇಕೆಂಬ ನಿಯಮವಿದೆ ಎಂದರೆ ಗ್ರಾಮೀಣ ಪ್ರದೇಶಗಳಲ್ಲಿ ಗನ್ ಎಷ್ಟು ಅವಶ್ಯಕ ಎಂಬುದನ್ನು ಕಲ್ಪಿಸಿಕೊಳ್ಳಬಹುದು.

ಅಮೆರಿಕದ ಸಂವಿಧಾನದ ಎರಡನೆಯ ತಿದ್ದುಪಡಿಯ (ಅಮೆಂಡ್‌ಮೆಂಟ್) ಪ್ರಕಾರ ಅಮೆರಿಕದ ನಿವಾಸಿಗಳು (ರಾಜ್ಯಾನುಸಾರ ಒಂದಿಷ್ಟು ನಿರ್ಬಂಧಿತ ವ್ಯಕ್ತಿ/ಗುಂಪುಗಳನ್ನು ಹೊರತುಪಡಿಸಿ) ಕಾನೂನುಬದ್ಧವಾಗಿಯೇ ಬಂದೂಕನ್ನು ಹೊಂದಬಹುದಾಗಿದೆ. ಹೀಗಾಗಿ ಏಕಾಏಕಿ ಗನ್ನುಗಳನ್ನು ಬಾಹಿರ ಮಾಡಿಬಿಟ್ಟರೆ 'ನಮ್ಮ ಸಾಂವಿಧಾನಿಕ ಹಕ್ಕನ್ನು ಕಸಿದುಕೊಳ್ಳುತ್ತಿದ್ದೀರಿ' ಎಂಬ ಕೂಗು ಭುಗಿಲೇಳಬಹುದು. ನಿಧಾನವಾಗಿ ಒಂದೊಂದೇ ನಿರ್ಬಂಧಗಳನ್ನು ಹೇರುತ್ತ ಸರಕಾರದ ಹೌಸ್ ಮತ್ತು ಸೆನೆಟ್ ಅಂಗಗಳು ದ್ವಿಪಕ್ಷೀಯ ಒಮ್ಮತದಿಂದ ಈ ಗನ್ ನೀತಿಗಳನ್ನು ಬಿಗಿಗೊಳಿಸಬೇಕಾಗಿದೆ.

ಆದರೆ ಹಾಗಾಗುವುದು ಸಾಧ್ಯವೇ ಇಲ್ಲ ಎನ್ನುವಷ್ಟು ದೂರದ ಹಾದಿ. ಇದಕ್ಕೆ ಮುಖ್ಯ ಕಾರಣ, ಅಮೆರಿಕದ 'ರಾಷ್ಟ್ರೀಯ ರೈಫಲ್ಲು ಸಂಸ್ಥೆ' (ಎನ್.ಆರ್.ಎ) ಮತ್ತಿತರ ಗನ್ ಹಕ್ಕು ಸಂರಕ್ಷಿಸುವ ಸಂಸ್ಥೆಗಳಿಗೆ ಇಲ್ಲಿರುವ ರಾಜಕೀಯ ಪ್ರಭಾವ. ಗನ್ ಕ್ರೌರ್ಯದಿಂದ ದೇಶ ಮುಕ್ತವಾಗಬೇಕಾದರೆ ಜನರ ಬಳಿ ಗನ್‌ಗಳು ಕಡಿಮೆಯಾಗುವುದಲ್ಲ, ಬದಲಿಗೆ ಹೆಚ್ಚಾಗಬೇಕು. ಪ್ರತಿ ಮನೆಯಲ್ಲೂ ಬಂದೂಕು ಇರಬೇಕು. ಎಲ್ಲರ ಬಳಿಯೂ ಗನ್ ಇದ್ದರೆ ಯಾರಿಗೆ ಯಾರೂ ಹೊಡೆಯಲಾರರು ಎಂಬ ಹೇಳಿಕೆ ನೀಡುವ ಧಾರ್ಷ್ಟ್ಯ ತೋರುತ್ತವೆ ಈ ಗನ್ ಹಕ್ಕು ಸಂಘಗಳು. ಆ ಸಂಸ್ಥೆಗಳಿಂದ ಚುನಾವಣಾ ಫಂಡ್ ಸ್ವೀಕರಿಸಿದ ರಾಜಕೀಯ ನಾಯಕರೂ ಈ ಅರ್ಥಹೀನ ಹೇಳಿಕೆಗಳನ್ನು ಸಮರ್ಥಿಸಿಕೊಳ್ಳುತ್ತಾರೆ.

ಟೆಕ್ಸಾಸ್ ಶಾಲೆಯ ಶೂಟಿಂಗ್ ಬಗ್ಗೆಯೂ ಕೆಲವು ರಾಜಕಾರಣಿಗಳು, 'ಶಾಲೆಯ ಟೀಚರ್‌ಗಳ ಬಳಿ ಗನ್ ಇದ್ದಿದ್ದರೆ ಇಷ್ಟೊಂದು ಸಾವು ಸಂಭವಿಸುತ್ತಿರಲಿಲ್ಲ,' 'ಶಾಲೆಗೆ ಒಂದೇ

ಬದುಕಿನ ಕನಸುಗಳು ಮೊಳಕೆಯೊಡೆಯಬೇಕಾದ ಕಂಗಳಲ್ಲಿ ಸಾವಿನ ನೆರಳು ಸುಳಿದರೆ, ನಾಳೆಯ ಬಗೆಗಿನ ನಂಬಿಕೆ ಉಳಿದೀತೆ?